**ದಿನಾಂಕ 15.11.2023 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಪಾಟೀಸವಾಲುಃ ಶ್ರೀ ಕೆ.ಯು. ವಕೀಲರಿಂದಃ</u>**

1. ನಾನು 5 ನೇ ತರಗತಿಯವರೆಗೂ ವ್ಯಾಸಾಂಗ ಮಾಡಿದ್ದೇನೆ. ನಮ್ಮ ತಂದೆಗೆ 3 ಜನ ಗಂಡು ಮಕ್ಕಳು ಮತ್ತು 5 ಜನ ಹೆಣ್ಣುಮಕ್ಕಳು. ಅವರುಗಳೆಂದರೆ, ಸುಬ್ಬರಾಯಶೆಟ್ಟಿ, ಸತ್ಯನಾರಾಯಣ ಶೆಟ್ಟಿ ಮತ್ತು ಪ್ರಸನ್ನಕುಮಾರ್ 3 ಜನ ಗಂಡು ಮಕ್ಕಳು, ಸೀತಾಲಕ್ಷ್ಮಿ, ಗಜಲಕ್ಷ್ಮಿ, ರಾಧಾಲಕ್ಷ್ಮಿ, ನವನೀತಲಕ್ಷ್ಮಿ ಮತ್ತು ಸತ್ಯಲಕ್ಷ್ಮಿ 5 ಜನ ಹೆಣ್ಣುಮಕ್ಕಳು. ಎಲ್ಲರ ಮದುವೆಯ ನಂತರ ನನ್ನ ಮದುವೆಯಾಗಿದೆ. ಪ್ರಸನ್ನಕುಮಾರ್ ರವರ ಹೆಂಡತಿ ಕೃಷ್ಣವೇಣಿಯವರು ಎಸ್.ಕೆ.ಗಂಗಾಧರಯ್ಯನವರ ಮಗಳು ಎಂದರೆ ಸರಿ. ಗಂಗಾಧರಯ್ಯನವರು ಮೊದಲಿನಿಂದಲೂ ಪ್ರಸಿದ್ಧ ಅಂಗಡಿ ವ್ಯಾಪಾರಸ್ಥರು ಎಂದರೆ ಸರಿ. ಕೃಷ್ಣವೇಣಿಯ ಮದುವೆಯಾದ ಸಮಯದಲ್ಲಿ ನನಗೆ 20 ವರ್ಷ ವಯಸ್ಸಾಗಿತ್ತು.
2. ಕೃಷ್ಣವೇಣಿಯ ಮದುವೆಯು 2 ದಿನಗಳು ಜರುಗಿರುತ್ತದೆ, ಒಂದು ದಿನ ಆರತಕ್ಷತೆ ಮತ್ತು ಇನ್ನೊಂದು ದಿನ ಮದುವೆ ನಡೆದಿರುತ್ತದೆ. ಮದುವೆಯ ಸಮಯದಲ್ಲಿ ಸಪ್ತಪದಿ ಮತ್ತು ಕಾಶಿಯಾತ್ರೆಯ ಎಲ್ಲಾ ಶಾಸ್ತ್ರಗಳನ್ನೂ ಸಹ ಮಾಡಲಾಯಿತು ಎಂದರೆ ಸರಿ. ನಮ್ಮ ಜನಾಂಗದಲ್ಲಿ ಮದುವೆಯ ವಿಚಾರವಾಗಿ ಬರವಣಿಗೆ ಮಾಡಿಕೊಳ್ಳುತ್ತಾರೆ ಎಂದರೆ ಸರಿ. ಸುಬ್ಬರಾಯಶೆಟ್ಟಿ ಮತ್ತು ಸತ್ಯನಾರಾಯಣಶೆಟ್ಟಿ ಮತ್ತು ನನ್ನ ಅಕ್ಕಂದಿರ ಮದುವೆಯಲ್ಲಿ ಎಲ್ಲಾ ಶಾಸ್ತ್ರ ಸಂಪ್ರದಾಯಗಳು ನಡೆದಿದೆ ಎಂದರೆ ಸರಿ. ಪ್ರಸನ್ನಕುಮಾರ್ ರವರು ಮದುವೆಯಾಗುವ ಸಮಯದಲ್ಲಿ ಅವರಿಗೆ ಯಾವುದೇ ಜಮೀನು ಆಸ್ತಿ ಇರಲಿಲ್ಲ ಎಂದರೆ ಸರಿ. ಗಂಗಾಧರಯ್ಯನವರು ತಮ್ಮ ಮಗಳು ಕೃಷ್ಣವೇಣಿಗಾಗಿ ಸ್ವಲ್ಪ ಹಣವನ್ನು ಕೊಟ್ಟಿದ್ದು, ಆ ಹಣದಿಂದಲೇ ಪ್ರಸನ್ನಕುಮಾರ್ ರವರು ಒಂದು ಅಂಗಡಿಯನ್ನು ನಡೆಸುತ್ತಿದ್ದರು ಎಂದರೆ ಸರಿ.
3. ನನ್ನ ಮದುವೆಯಾಗಿ ಸುಮಾರು 62 ವರ್ಷ ಆಗಿದೆ. ನನಗೆ 3 ಜನ ಮಕ್ಕಳು ಇದ್ದಾರೆ ಎಂದರೆ ಸರಿ. ಮಧು, ವೆಂಕಟೇಶ್ ಮತ್ತು ಪ್ರವೀಣ್ ಎಂಬ 3 ಮಕ್ಕಳು. ಮಧು ಮತ್ತು ಪ್ರವೀಣ್ ರವರು ಬೇರೆ ವಾಸವಾಗಿದ್ದಾರೆ, ನಾನು ಮತ್ತು ವೆಂಕಟೇಶ್ ಜೊತೆಯಲ್ಲಿ ಇದ್ದೇವೆ ಎಂದರೆ ಸರಿ. ವೆಂಕಟೇಶ್ ಎನ್ನುವವರಿಗೆ ಮದುವೆಯಾಗಿಲ್ಲ ಎಂದರೆ ಸರಿ. ವೆಂಕಟೇಶ್ ಮತ್ತು 2 ನೇ ವಾದಿ ಹನುಮಂತಪ್ಪನವರು ಮೊದಲಿನಿಂದಲೂ ಕೂಡ ಸ್ನೇಹಿತರು ಎಂದರೆ ಸರಿಯಲ್ಲ.

ಸಾಕ್ಷಿ ಮುಂದುವರೆದು ಹನುಮಂತಪ್ಪನವರು ನನ್ನ ಅಣ್ಣನ ಮಗ ಎಂದು ನುಡಿಯುತ್ತಾರೆ. ವೆಂಕಟೇಶ್ ಮತ್ತು ಹನುಮಂತಪ್ಪ ಸುಮಾರು 15 ಮತ್ತು 20 ವರ್ಷಗಳಿಂದ ಗ್ರಾನೈಟ್ ಬ್ಯುಸಿನೆಸ್ ಮಾಡುತ್ತಾರೆ ಎಂದರೆ ಸರಿಯಲ್ಲ. ನನ್ನ ಮಗ ಇನ್ಸುರೆನ್ಸ್ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದಾನೆ, ಹನುಮಂತಪ್ಪ ಗ್ರಾನೈಟ್ ಬ್ಯುಸಿನೆಸ್ ಮಾಡುತ್ತಿರಬಹುದು.

4. ನಾನು ಮತ್ತು ನನ್ನ ಮಕ್ಕಳು ಮಧು ಮತ್ತು ಪ್ರವೀಣ್ ರವರ ಜೊತೆ ಚೆನ್ನಾಗಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣಂದಿರು ಸುಬ್ಬರಾಯಶೆಟ್ಟಿ, ಸತ್ಯನಾರಾಯಣ ಶೆಟ್ಟಿ ಮತ್ತು ಪ್ರಸನ್ನಕುಮಾರ್ ರವರು ನನ್ನ ಮದುವೆಯಾದ ನಂತರ ಅಷ್ಟಕ್ಕೆ ಅಷ್ಟೆ ಮಾತುಕತೆ ಎಂದರೆ ಸರಿಯಲ್ಲ. ನಾನು ನನ್ನ ತಾಯಿ ಮನೆಗೆ ಆಗ್ಗಾಗ್ಗೆ ಹೋಗಿ ಬಂದು ಮಾಡುತ್ತಿದ್ದೆನು, ಅವರಿಗೆ ನನ್ನ ಮೇಲೆ ಪ್ರೀತಿ ಇದೆ. ನಮ್ಮ ಅಣ್ಣನ ಮಕ್ಕಳು ಮತ್ತು ಅಕ್ಕಂದಿರ ಮಕ್ಕಳ ನಡುವೆ ನನಗೆ ವಿಶ್ವಾಸ ಚೆನ್ನಾಗಿಲ್ಲ ಎಂದರೆ ಸರಿಯಲ್ಲ, ನಾವೆಲ್ಲರೂ ಚೆನ್ನಾಗಿಯೇ ಇದ್ದೇವೆ ಎಂದು ನುಡಿಯುತ್ತಾರೆ. ನನ್ನ ಅಣ್ಣಂದಿರು ತೀರಿಕೊಂಡ ಸಮಯದಲ್ಲಿ ನಾನು ಅವರ ಅಂತ್ಯಸಂಸ್ಕಾರಕ್ಕಾಗಿ ಹೋಗಿಲ್ಲ ಎಂದರೆ ಸರಿಯಲ್ಲ.

5. ಪ್ರಸನ್ನಕುಮಾರ್ ಮತ್ತು ಕೃಷ್ಣವೇಣಿ ರವರ ಮಕ್ಕಳು ನನ್ನ ಜೊತೆ ಚೆನ್ನಾಗಿಲ್ಲ ಎಂದರೆ ಸಾಕ್ಷಿಯು ಅವರ ಮನೆಯಲ್ಲಿ ಈಗ ತಾನೆ ಮದುವೆಯಾಗಿದ್ದು, ಅದಕ್ಕೆ ನನ್ನನ್ನು ಕರೆದಿಲ್ಲ ಅರಿಶಿಣ ಕುಂಕುಮಕ್ಕೂ ನನ್ನನ್ನು ಕರೆಯುವುದಿಲ್ಲ ಎಂದು ನುಡಿಯುತ್ತಾರೆ. ನನಗೂ ಪ್ರಸನ್ನಕುಮಾರ್ ರವರ ಮಕ್ಕಳಿಗೂ ದ್ವೇಶವಿರುವ ಕಾರಣ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಯಜಮಾನರು ತೀರಿಕೊಂಡು ಸುಮಾರು 30 ವರ್ಷಗಳು ಆಗಿವೆ ಎಂದರೆ ಸರಿಯಲ್ಲ. ಕೃಷ್ಣವೇಣಿ ತೀರಿಕೊಂಡ ನಂತರ ಅವರ ಅಂತ್ಯಸಂಸ್ಕಾರಕ್ಕೆ ನಾನು ಹೋಗಿಲ್ಲ ಎಂದರೆ ಸಾಕ್ಷಿಯು ಅವರು ತೀರಿಕೊಂಡ ವಿಚಾರವನ್ನು ನನಗೆ ಹೇಳಿರುವುದಿಲ್ಲ ಮತ್ತು ವೈಕುಂಠಸಮಾರಾಧನೆಗೂ ನನ್ನನ್ನು ಕರೆದಿರುವುದಿಲ್ಲ ಎಂದು ನುಡಿಯುತ್ತಾರೆ.

6. ನಾನು ಎಲ್ಲಿಗಾದರೂ ಹೋಗಬೇಕು ಎಂದರೆ ಹನುಮಂತಪ್ಪನವರು ತಮ್ಮ ಕಾರಿನಲ್ಲಿಯೇ ಕರೆದುಕೊಂಡು ಹೋಗುತ್ತಾರೆ ಎಂದರೆ ಸಾಕ್ಷಿಯು ನಾನು ಕೇಳಿದರೆ ಬರುತ್ತಾರೆ, ಇಲ್ಲವಾದರೆ ಇಲ್ಲ ಎಂದು ನುಡಿಯುತ್ತಾರೆ. ನನ್ನ ಮಗ ವೆಂಕಟೇಶನ ವಯಸ್ಸು ಸುಮಾರು 56 ಇರಬಹುದು ಎಂದು ನುಡಿಯುತ್ತಾರೆ. ಕೃಷ್ಣವೇಣಿಯವರ ಮಕ್ಕಳಿಗೂ ಮತ್ತು ನಮಗೂ

ವಿಶ್ವಾಸ ಚೆನ್ನಾಗಿಲ್ಲದೇ ಇರುವ ಕಾರಣ ಅವರ ವಿರುದ್ಧ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬೆಂಗಳೂರಿನಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದೇನೆ. ನಮಗೆ ಯಾವುದೇ ಸ್ವಂತ ಮನೆ ಇರುವುದಿಲ್ಲ. ನನ್ನ ಅಣ್ಣಂದಿರಾದ ಸುಬ್ಬರಾಯಶೆಟ್ಟಿ ಮತ್ತು ಸತ್ಯನಾರಾಯಣಶೆಟ್ಟಿಯವರ ಮದುವೆಯನ್ನು ನಾನು ನೋಡಿದ್ದೇನೆ.

7. ಸದರಿ ದಾವೆಯನ್ನು ಯಾರು ಯಾರ ವಿರುದ್ಧ ಕೇಸನ್ನು ತಂದಿದ್ದಾರೆ ಎಂದರೆ ಸಾಕ್ಷಿಯು ನನ್ನ ಅಣ್ಣನ ಮಗ ಹನುಮಂತಪ್ಪನವರು ಪ್ರಸನ್ನಕುಮಾರ್ ಮತ್ತು ಕೃಷ್ಣವೇಣಿಯವರ ಮೂರು ಮಕ್ಕಳಾದ ಮಂಜುನಾಥ, ಆಂಜನೇಯಮೂರ್ತಿ ಮತ್ತು ಇತರರ ಮೇಲೆ ತಂದಿದ್ದಾರೆ ಎಂದು ನುಡಿಯುತ್ತಾರೆ. ಹನಮುಂತಪ್ಪ ನನ್ನ ಅಣ್ಣನ ಮಗ ಎಂದು ತೋರಿಸಲು 2000 ನೇ ಸಾಲಿನ ಹಿಂದಿನ ಯಾವುದಾದರೂ ದಾಖಲಾತಿಯನ್ನು ನೋಡಿದ್ದೀರಾ ಎಂದರೆ ಸಾಕ್ಷಿಯು ದಾಖಲಾತಿಯನ್ನು ನೋಡಿಲ್ಲ ಆದರೆ ನನ್ನ ಅಣ್ಣ ಮಗುವನ್ನು ಎತ್ತಿಕೊಂಡು ಬಂದು 2 ನೇ ವಾದಿಯನ್ನು ತೋರಿಸಿ ನನ್ನ ಮಗ ಎಂದು ಹೇಳಿರುತ್ತಾರೆ. ಆ ರೀತಿ ಯಾವ ದಿನಾಂಕದಂದು ಹೇಳಿದ್ದರು ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.

8. ಹನುಮಂತಪ್ಪನವರ ಶಾಲಾ ದಾಖಲಾತಿಯಲ್ಲಿ ಅವರ ತಂದೆಯ ಹೆಸರು ಏನೆಂದು ನಮೂದು ಆಗಿದೆ ಎಂದರೆ ಸಾಕ್ಷಿಯು ನಾನು ಅತ್ತೆ ಮನೆಯಲ್ಲಿ ವಾಸವಾಗಿದ್ದು, ನನಗೆ ಆ ಬಗ್ಗೆ ಗೊತ್ತಿಲ್ಲ ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಹನುಮಕ್ಕ ಎನ್ನುವವರನ್ನು ಪ್ರಸನ್ನಕುಮಾರ್ ಎನ್ನುವವರು ಮದುವೆಯಾಗಿದ್ದರು ಎಂದು ಹೇಳಿದ್ದು, ಸದರಿ ಮದುವೆ ಯಾವ ದಿನಾಂಕದಂದು ನಡೆದಿದೆ ಎಂದರೆ ಸಾಕ್ಷಿಯು ತಾವರೆಕೆರೆಯ ರಂಗನಾಥಸ್ವಾಮಿ ದೇವಸ್ಥಾನದಲ್ಲಿ ನಡೆದಿದ್ದು, ಮನೆಯಲ್ಲಿ ನಮಗೆ ಯಾರಿಗೂ ಇಷ್ಟಇಲ್ಲದೇ ಇರುವ ಕಾರಣ ನಾವು ಯಾರೂ ಸಹ ಮದುವೆಗೆ ಹೋಗಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ .

9. ಹನುಮಂಕ್ಕ ಮತ್ತು ಪ್ರಸನ್ನಕುಮಾರ್ ರವರ ಮದುವೆಯ ಸಮಯದಲ್ಲಿ ನನಗೆ 16 ವರ್ಷ ವಯಸ್ಸಾಗಿತ್ತು. ಅವರ ಮದುವೆಯ ಬಗ್ಗೆ ನಾನು ದಾಖಲಾತಿಯನ್ನು ನಾನು ನೋಡಿಲ್ಲ. ಹನುಮಂಕ್ಕ ಮತ್ತು ಪ್ರಸನ್ನಕುಮಾರ್ ರವರ ಮದುವೆಯ ಬಗ್ಗೆ ಯಾವುದೇ ದಾಖಲಾತಿ ಇಲ್ಲ ಎಂದರೆ ಸರಿ, ಆದರೆ ಊರಿನವರಿಗೆಲ್ಲ ಗೊತ್ತಿತ್ತು ಎಂದು ನುಡಿಯುತ್ತಾರೆ. 2 ನೇ ವಾದಿ ತಿಮ್ಮಾಭೋವಿ ಎನ್ನುವವರ ಮಗ ಎಂದರೆ ಸರಿಯಲ್ಲ, ಅವರು ನಮ್ಮ ಅಣ್ಣನ ಮಗ ಎಂದು

ನುಡಿಯುತ್ತರೆ. 2 ನೇ ವಾದಿಯ ಶಾಲಾ ದಾಖಲಾತಿಗಳಲ್ಲಿ ಹನುಮಂತಪ್ಪ ಬಿನ್ ತಿಮ್ಮಾಭೋವಿ ಎಂದು ನಮೂದು ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2 ನೇ ವಾದಿ ನನ್ನ ಅಣ್ಣನ ಮಗ ಎಂದು ಮಾತ್ರ ಹೇಳುತ್ತೇನೆ ಎಂದು ನುಡಿಯುತ್ತಾರೆ. 2 ನೇ ವಾದಿ ನನ್ನ ಮಗನ ಸ್ನೇಹಿತನಾದ ಕಾರಣ ಎಲ್ಲರೂ ಶಾಮೀಲಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತಾವರೆಕೆರೆ ರಂಗನಾಥ ಸ್ವಾಮಿ ದೇವಸ್ಥಾನದಲ್ಲಿ ಹನುಮಕ್ಕ ಮತ್ತು ಪ್ರಸನ್ನಕುಮಾರ್ ರವರ ಮದುವೆಯಾಗಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. ಪ್ರಸನ್ನಕುಮಾರ್ ಮತ್ತು ಹನುಮಕ್ಕನವರಿಂದ 2 ನೇ ವಾದಿ ಹನುಮಂತಪ್ಪನವರು ಜನಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಣೇಶನ ದೇವಸ್ಥಾನದ ಬಳಿ ಕಿರಾಣಿ ಅಂಗಡಿಯನ್ನು ಇಟ್ಟುಕೊಂಡು 1 ಮತ್ತು 2 ನೇ ವಾದಿಗಳು ವ್ಯಾಪಾರ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮದುವೆಗಿಂತ ಮೊದಲಿನಿಂದಲೂ 1 ನೇ ವಾದಿ ವ್ಯಾಪಾರ ಮಾಡುತ್ತಿದ್ದರು ಎಂದು ಸಾಕ್ಷಿ ಮುಂದುವರೆದು ನುಡಿಯುತ್ತಾರೆ. ನನಗೂ ಪ್ರತಿವಾದಿಗಳಿಗೂ ದ್ವೇಶವಿರುವ ಕಾರಣ ಉದ್ದೇಶಪೂರ್ವಕವಾಗಿ ಅವರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ಇರುವ ವಿಚಾರಗಳನ್ನು 2 ನೇ ವಾದಿಯೇ ತಯಾರು ಮಾಡಿಕೊಂಡು ಬಂದು ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯವರ ಮಾತುಗಳನ್ನು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆಯನ್ನು ಎಷ್ಟು ಸ್ವತ್ತುಗಳ ಮೇಲೆ ತಂದಿದ್ದಾರೆ ನನಗೆ ಗೊತ್ತಿಲ್ಲ.

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು) **ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**